ಹೊಸನಗರ ಕೊಡಚಾದ್ರಿ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಒಬ್ಬರನ್ನು ಬಿಟ್ಟು ಉಳಿದ ಎಲ್ಲರೂ ಗುತ್ತಿಗೆ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಇಂತಹವರ ವಯಸ್ಸಿನ ಪರಿಮಿತಿ ಹೆಚ್ಚುಕಡಿಮೆ ಆದರೆ, ಇವರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಜೀವರಾಜ ಆಳ್ವ.—ಈಗಾಗಲೇ ವಿದ್ಯಾಇಲಾಖೆಯ ಕಾರ್ಯದರ್ಶಿಗಳವರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ, ಸಮಿತಿಯ ಅಧ್ಯಕ್ಷರಿಗೆ ಈ ವಿಷಯವನ್ನು ಪರಿಶೀಲನೆ ಮಾಡುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಬಿ. ಸ್ವಾಮಿ ರಾವ್.—ಅಧ್ಯಕ್ಷರೇ,...

ಅಧ್ಯಕ್ಷರು.—ತಮಗೆ ಮೂರು ಸಾರಿ ಅವಕಾಶ ಕೊಟ್ಟಿದ್ದೇನೆ, ತಾವು ಕೇಳಿತುಕೊಳ್ಳಿ.

೭೧೨ (೨೨೨೧)ರ ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳೋಣ, ಮಾನ್ಯ ಮಂತ್ರಿಗಳು ಬಂದಮೇಲೆ ಇವತ್ತೇ ತೆಗೆದುಕೊಳ್ಳೋಣ.

ಪ್ರಶ್ನೆ ೭೧೩(೨೩೮೨)ನ್ನು ಆಮೇಲೆ ತೆಗೆದುಕೊಳ್ಳೋಣ. ಈಗ ಸಂಬಂಧಪಟ್ಟ ಮಂತ್ರಿಗಳು ಇಲ್ಲ, ಆನಂತರ ತೆಗೆದುಕೊಳ್ಳೋಣ.

ಕಾಪು ಕ್ಷೇತ್ರದ ಸರ್ಕಾರಿ ಜೂನಿಯರ್ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಮಾಡುವ ಕಾರ್ಯಕ್ರಮ ಸರ್ಕಾರದಲ್ಲಿದೆಯೇ ?

೭೧೪. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕಾಪು ಕ್ಷೇತ್ರದ ಕಾಪು ಮಂಡಲಕ್ಕೆ ಸೇರಿದ ಸರ್ಕಾರಿ ಜೂನಿಯರ್ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಮಾಡುವ ಕಾರ್ಯಕ್ರಮ ಸರ್ಕಾರದಲ್ಲಿ ಇದೆಯೇ ?

(ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

(ಅ) ಇಲ್ಲ

(ಆ) ಪ್ರಶ್ನೆ ಉದ್ಭವಿಸುವುದಿಲ್ಲ.

(ಅ) ಪ್ರಶ್ನೆಗೆ, ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಉತ್ತರ ಕೊಟ್ಟಿದ್ದೇನೆ. ಹಿಂದಿನ ವರ್ಷ ಹಣಕಾಸಿನ ಕೊರತೆಯಿಂದ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ಈ ವರ್ಷ ಪ್ರಯತ್ನ ಮಾಡುತ್ತೇನೆ.

ಶ್ರೀ ವಸಂತ ವಿ. ಸಾಲ್ಯಾನ.—ಸನ್ಮಾನ್ಯ ಅಧ್ಯಕ್ಷರೇ, ಇಲಾಖೆಯವರು ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಕಳುಹಿಸಿದ್ದಾರೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ೭ ಜೂನಿಯರ್ ಕಾಲೇಜುಗಳು ಇವೆ. ಆದರೆ ಪೂರ್ಣಪ್ರಮಾಣದ ಕಾಲೇಜು ಇಲ್ಲದೇ ಇರುವುದರಿಂದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಬಹಳ ಕಷ್ಟವಾಗಿದೆ. ಆದುದರಿಂದ ಇಲ್ಲಿ ಒಂದು ಪೂರ್ಣ ಪ್ರಮಾಣದ ಕಾಲೇಜನ್ನು ತೆರೆಯಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಜೀವರಾಜ ಆಳ್ವ.—ಈ ವರ್ಷ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—೭೧೫(೨೩೮೮) ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಈಗ ಕೌನ್ಸಿಲ್ ಕೂಡ ಅಡ್ಜರ್ನ್ ಆಗಿದೆ. ಹಾಗಾದರೆ ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ. ತಾವು ಯಾವಾಗ ಕೇಳಿದರೂ ಇದೇ ರೀತಿ ಹೇಳುತ್ತೀರಿ.

ಅಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳನ್ನು ಕರೆಯಿಸುತ್ತೇನೆ. ಈಗಾಗಲೇ ಕರೆದುಕೊಂಡು ಬರುವುದಕ್ಕೆ ಹೋಗಿದ್ದಾರೆ. ಇಬ್ಬರು ಮಂತ್ರಿಗಳು ಬಂದಿಲ್ಲ, ಅವರನ್ನು ಕರೆಯಿಸುತ್ತೇನೆ.